## ಅಪಾಯಕಾರಿ ಸರ್ಕಸ್ ಬೇಡ

ಝೀ ಕನ್ನಡದಲ್ಲಿ ‘ಝೀ ಎಂಟರ್‌ಟ್ರೈನರ್ಸ್’ ಶೋ ಪ್ರಾರಂಭ ಆಗಿದೆ. ಝೀ ವಾಹಿನಿಯಲ್ಲಿ ಪ್ರಸಾರ ಆಗುತ್ತಿರುವ ಧಾರಾವಾಹಿಗಳ ನಟ ನಟಿಯರು ‘ಸೀರಿಯಲ್ ಕುಟುಂಬ’ ಎಂಬ ವೇದಿಕೆಯಲ್ಲಿ ಭಾಗವಹಿಸುವುದೇ ಇದರ ವಿಶೇಷ. ಈ ಶೋನಲ್ಲಿ ಕೆಲವು ಅಪಾಯಕಾರಿ ಸ್ಪರ್ಧೆಗಳಿದ್ದು, ಸರ್ಕಸ್ ಕಂಪನಿ ಜ್ಞಾಪಕಕ್ಕೆ ಬರುತ್ತಿದೆ. ಈಗಾಗಲೇ ಕೆಲವರು ಸಣ್ಣ ಪುಟ್ಟ ಗಾಯಗಳನ್ನೂ ಮಾಡಿಕೊಂಡಿದ್ದಾರೆ. ಸ್ವಲ್ಪ ಯಾಮಾರಿದರೂ ಗಂಭೀರ ಸ್ವರೂಪದ ಅಪಘಾತ ಎದುರಿಸಬೇಕಾಗುತ್ತದೆ. ಮನರಂಜನೆಗೆ ಈ ರೀತಿಯ ಸರ್ಕಸ್ ಬೇಡವೇ ಬೇಡ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಸಂಬಂಧ ವಾಚಕಗಳ ಎಡವಟ್ಟು

ಕಾಲ ಸರಿಯುತ್ತಾ ಮಾನವ ಸಂಬಂಧಗಳು ವ್ಯಾವಹಾರಿಕವಾಗುತ್ತಿವೆ. ಈಗಿನ ಮಕ್ಕಳಿಗೆ ತಮ್ಮ ಸಂಬಂಧಿಗಳ ಪೈಕಿ ಯಾರು ಯಾರಿಗೆ ಏನೇನಾಗಬೇಕು ಎಂಬುದೇ ಸರಿಯಾಗಿ ಗೊತ್ತಾಗದ ಪರಿಸ್ಥಿತಿ ಇದೆ. ಹೀಗಿರುವಾಗ ಅತ್ಯಂತ ಪ್ರಭಾವೀ ಮಾಧ್ಯಮ ಟೀವಿ ಧಾರಾವಾಹಿಗಳಲ್ಲೂ ಸಹ ನಿಜವಾದ ಸಂಬಂಧಗಳನ್ನು ರೂಪಿಸುವುದು ಬೇಡವೆ? ಕಲರ್ಸ್ ಕನ್ನಡದ ‘ಲಕ್ಷ್ಮೀ ಬಾರಮ್ಮ’ದಲ್ಲಿ ಕಾವೇರಿಯ ಗಂಡ ಕೃಷ್ಣನ ತಂಗಿ ಸುಪ್ರಿಯಾ. ಸುಪ್ರಿಯಾಳನ್ನು ವೈಷ್ಣವ್ ‘ಅತ್ತೆ’ ಎಂದೇ ಸಂಬೋಧಿಸುತ್ತಾನೆ. ಆದರೆ ಸುಪ್ರಿಯಾಳ ಮಗ ಅಂಕಿತನ ಸೋದರ ಮಾವನ ಮಗ ವೈಷ್ಣವ್ ವರಸೆಯಲ್ಲಿ ಮಾವನಾಗುತ್ತಾನೆ. ವೈಷ್ಣವನ ಹೆಂಡತಿ ಲಕ್ಷ್ಮಿ ಸೋದರಿಯಾಗುತ್ತಾಳೆ. ಅಂಕಿತ್ ವೈಷ್ಣವನನ್ನು ಅಣ್ಣ ಎಂದೂ ಲಕ್ಷ್ಮಿಯನ್ನು ಅತ್ತಿಗೆ ಎಂದೂ ಸಂಬೋಧಿಸುತ್ತಾನೆ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ತಾಳ್ಮೆ ಪರೀಕ್ಷಿಸುವ ಕಂಟಕಗಳು

ಕಲರ್ಸ್ ಕನ್ನಡದ ‘ಭಾಗ್ಯಲಕ್ಷ್ಮೀ’, ‘ಲಕ್ಷ್ಮೀ ಬಾರಮ್ಮ’ ಮತ್ತು ‘ರಾಮಾಚಾರಿ’ ಧಾರಾವಾಹಿಗಳು ಅತಿ ಎನಿಸುತ್ತಿವೆ. ‘ಭಾಗ್ಯಲಕ್ಷ್ಮೀ’ಯಲ್ಲಿ ಶ್ರೇಷ್ಠಾ ಮತ್ತು ತಾಂಡವ್ ಕುಡಿದು ಭಾಗ್ಯಾಳನ್ನು ಹೀಯಾಳಿಸುತ್ತಾರೆ. ಅದಕ್ಕವಳು ನಿತ್ಯವೂ ಗೋಳಾಡುತ್ತಾಳೆ. ‘ಲಕ್ಷ್ಮೀ ಬಾರಮ್ಮ’ದಲ್ಲಿ ಸತ್ತಿದ್ದಾಳೆ ಎಂದುಕೊಂಡ ಕೀರ್ತಿ ಸಾಕ್ಷಿ ಸಮೇತ ಕಾವೇರಿಯ ಕುತಂತ್ರಗಳನ್ನು ಬಹಿರಂಗಪಡಿಸುತ್ತಾಳೆ. ‘ರಾಮಚಾರಿ’ಯಲ್ಲಿ ಕೃಷ್ಣನ ಹುಡುಗಿಯನ್ನು ಕರೆತರಲು ಶಾಸ್ತ್ರಿ ಮನೆಯವರೆಲ್ಲೂ ವಿಜೃಂಭಣೆಯಿಂದ ಸಿದ್ಧವಾಗಿ ಹೊರಡಿಸುತುವುದು ಅಸಂಬದ್ಧವಾಗಿ ಕಾಣಿಸುತ್ತಿದೆ. ಇನ್ನೂ ಎಷ್ಟು ದೀರ್ಘಕಾಲ ಈ ಧಾರಾವಾಹಿಗಳು ವೀಕ್ಷಕರ ಸಹನೆಯನ್ನು ಪರೀಕ್ಷಿಸುತ್ತವೆಯೋ ನೋಡಬೇಕು.

—ಶರ್ಮಿಷ್ಠಾ ವೇದಗರ್ಭ

ವಾರದ ಪತ್ರ

## ಅಚಾನಕ್ಕಾಗಿ ಸಾಯುವ ಪಾತ್ರಗಳು

ಕೆಲವು ಕಲಾವಿದರು ಧಾರಾವಾಹಿಗಳ ನಡುವೆಯೇ ಇದ್ದಕ್ಕಿದ್ದಂತೆ ಕಣ್ಮರೆಯಾಗುತ್ತಾರೆ. ಆಮೇಲೆ ಆ ಪಾತ್ರವನ್ನೇ ಸಾಯಿಸುತ್ತಾರೆ. ಕೆಲವೊಮ್ಮೆ ಅವರ ಫೋಟೊವನ್ನು ಹಾರಸಹಿತ ಗೋಡೆಯ ಮೇಲೆ ತೂಗುಹಾಕುವುದುಂಟು. ಇನ್ನೂ ವಿಚಿತ್ರ ಎಂದರೆ, ಸತ್ತ ಪಾತ್ರ ಇದ್ದಕ್ಕಿದ್ದಂತೆ ಮರು ಸೃಷ್ಟಿಯಾಗಿ ಮುಂದುವರಿಯುತ್ತದೆ. ದ್ವಿಪಾತ್ರಗಳ ನಕಲಿ ಪಾತ್ರಗಳ ಹಾವಳಿಯೂ ಹೆಚ್ಚಾಗಿದೆ. ಝೀ ಕನ್ನಡದ ‘ಪುಟ್ಟಕ್ಕನ ಮಕ್ಕಳು’ ಧಾರಾವಾಹಿಯಲ್ಲಿ ಬಂಗಾರಮ್ಮನ ಸ್ಥಾನಕ್ಕೆ ಡೂಪ್ಲಿಕೇಟ್ ಸಿಂಗಾರಮ್ಮ ವಕ್ಕರಿಸಿದರೆ, ‘ಸೀತಾರಾಮ’ದಲ್ಲಿ ಪುಟಾಣಿ ಸಿಹಿಯ ಪಾತ್ರ ನೇಪಥ್ಯಕ್ಕೆ ಸರಿದು, ಅವಳ ತದ್ರೂಪಿ ಹುಡುಗಿಯನ್ನು ತೋರಿಸಲು ಭೂಮಿಕೆ ಸಿದ್ಧವಾಗಿದೆ. ‘ಅಮೃತಧಾರೆ’ಯಲ್ಲಿ ತಾಯಿಗಾಗಿ ಹಂಬಲಿಸುವ ಗೌತಮ್ ದಿವಾನ್‌ಗೆ ಮಾತೃಪ್ರೇಮ ಸಿಗುವ ನಿರೀಕ್ಷೆ ಇದೆ.

—ಆಕರ್ಷನ್, ಮೂಡುಬಿದಿರೆ

## ಗೊಂದಲವೇ ಒಂದು ಟಾಸ್ಕ್

ಹಲವು ಮನೋಭಾವದ ವ್ಯಕ್ತಿಗಳು ಒಂದೆಡೆ ವಾಸಿಸುವುದು ಕಷ್ಟ ಎನ್ನುವ ಪರಿಕಲ್ಪನೆಯಲ್ಲಿ ರೂಪುಗೊಂಡ ಪ್ರಯೋಗ ‘ಬಿಗ್ ಬಾಸ್’. ನಮ್ಮಲ್ಲಿ ಇಪ್ಪತ್ತರಿಂದ ನೂರು ಜನರಿರುವ ಕುಟುಂಬಗಳನ್ನು ನೋಡಿದ್ದೇವೆ. ಪಾಶ್ಚಾತ್ಯರು ಮಾಡಿರುವುದೆಲ್ಲ ಶ್ರೇಷ್ಠ ಎಂಬ ಭ್ರಮೆಯಲ್ಲಿ ‘ಬಿಗ್ ಬಾಸ್’ ರೂಪದಲ್ಲಿಯೂ ಅನುಸರಿಸಲಾಗುತ್ತಿದೆ. ಮೊದಲು ಹಿಂದಿಯಲ್ಲಿ ಆರಂಭವಾದ ಈ ಕಾರ್ಯಕ್ರಮ ಕ್ರಮೇಣ ಪ್ರಾದೇಶಿಕ ಭಾಷೆಗಳಿಗೂ ವ್ಯಾಪಿಸಿದೆ. ಈ ಶೋ ಎಂದರೆ, ವಿವಾದಕ್ಕೆ ಒಳಗಾದ ಮತ್ತು ವಿಚಿತ್ರ ನಡವಳಿಕೆಯ ವ್ಯಕ್ತಿಗಳು ಸ್ಪರ್ಧಿಗಳಾಗಿರುವುದು. ‘ಬಿಗ್ ಬಾಸ್’ ಟಾಸ್ಕ್‌ಗಳಲ್ಲಿ ಜಗಳ ಹಾಗೂ ಗೊಂದಲವೇ ಹೆಚ್ಚಾಗಿ ಕಂಡುಬರುತ್ತದೆ.

—ಮುರಲೀಧರ ಕುಲಕರ್ಣಿ, ಬೀದರ್




ಕಲರ್ಸ್ ಕನ್ನಡದ ಪ್ರಸಿದ್ಧ ರಿಯಾಲಿಟಿ ಶೋ ‘ಬಿಗ್ ಬಾಸ್’ನ ಇತ್ತೀಚಿನ ಸಂಚಿಕೆಯಲ್ಲಿ ಸ್ಪರ್ಧಿಗಳು ತಮ್ಮ ಎದುರಾಳಿ ತಂಡದ ಸದಸ್ಯರಿಗೆ ಹಾಗಲಕಾಯಿ, ಮೆಣಸಿನಕಾಯಿ ತಿನ್ನಿಸುವ, ತಲೆ ಬೋಳಿಸುವ ವಿಚಿತ್ರ ಚಾಲೆಂಜ್‌ಗಳನ್ನು ನೀಡಿದ್ದರು. ಈ ರೀತಿಯ ಅಸಹನೀಯ ಸವಾಲುಗಳ ಬದಲು ನಮ್ಮ ನಾಡು–ನುಡಿಗೆ ಸಂಬಂಧಿಸಿದ ರಸಪ್ರಶ್ನೆಗಳ ಸುತ್ತನ್ನು ಏರ್ಪಡಿಸಿದ್ದರೆ ಸಮಂಜಸ ಎನಿಸುತ್ತಿತ್ತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಕಲರ್ಸ್ ಕನ್ನಡದ ‘ಬಿಗ್ ಬಾಸ್’ ರಿಯಾಲಿಟಿ ಶೋ ಈ ಬಾರಿ ಬರೀ ಖಾಲಿ ಡಬ್ಬದ ಸದ್ದಿನಂತಿದೆ. ಅಲ್ಲಿರುವ ಎಲ್ಲ ಸ್ಪರ್ಧಿಗಳನ್ನು ನೋಡಿದಾಗ ಹನುಮಂತು ಅವರ ಪ್ರಬುದ್ಧತೆ ಎದ್ದುಕಾಣುತ್ತದೆ. ಶಿಕ್ಷೆ ಎಂದು ಸ್ಪರ್ಧಿಗಳ ಬಾಯಿಗೆ ಆಲೂಗೆಡ್ಡೆ ತುರುಕುವುದು, ತಲೆ ಬೋಳಿಸುವುದು, ಮೆಣಸಿನಕಾಯಿ ತಿನ್ನಿಸುವುದು, ಇವೆಲ್ಲ ಅನಾಗರಿಕ ವರ್ತನೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮೆಚ್ಚಲು ಇನ್ನೇನು ಹೆಚ್ಚಿನದು ಬೇಕು

ಚಂದನದ ‘ಥಟ್ ಅಂತ ಹೇಳಿ’ ಕಾರ್ಯಕ್ರಮ ಒಂದರಲ್ಲಿ ಬೆಂಗಳೂರು ಮೆಟ್ರೊ ರಕ್ಷಣಾ ಸಿಬ್ಬಂದಿ ಮತ್ತು ಸ್ವಚ್ಛತಾ ಕೆಲಸಗಾರರಿಗೆ ಅವಕಾಶ ಕೊಟ್ಟಿದ್ದು ಪ್ರಶಂಸನೀಯ. ನಿತ್ಯವೂ ನಮಗೆ ಅಗತ್ಯ ಸೇವೆಯನ್ನು ಒದಗಿಸುವ ಉದ್ಯೋಗಿಗಳನ್ನು ಗುರ್ತಿಸುವ ಪ್ರಯತ್ನವನ್ನೇ ನಾವು ಮಾಡುವುದಿಲ್ಲ. ನಿರ್ಲಕ್ಷಿತ ವೃತ್ತಿ ಸಮುದಾಯಗಳನ್ನು ಗುರುತಿಸುವಂತಹ ಇಂತಹ ಗುಣಾತ್ಮಕ ಕಾರ್ಯದಿಂದ ಈ ಕಾರ್ಯಕ್ರಮ ಮತ್ತಷ್ಟು ಮೆಚ್ಚುಗೆ ಆಗುತ್ತಿದೆ.

—ಬಿ. ಬಸವರಾಜ, ಹರಿಹರ

## ಇಂಪಾದ ಮಾತುಕತೆ

ಚಂದನದ ‘ಶುಭೋದಯ ಕರ್ನಾಟಕ’ದಲ್ಲಿ ಶಹನಾಯ್ ವಾದಕ ಬಸಪ್ಪ ಭಜಂತ್ರಿ ಅವರ ಸಂದರ್ಶನ ತುಂಬ ಚೆನ್ನಾಗಿ ಮೂಡಿಬಂದಿತು. ಅವರ ಶಹನಾಯ್ ವಾದನ ಆಲಿಸಿದಾಗ ಪಂಡಿತ ಬಿಸ್ಮಿಲ್ಲಾ ಖಾನ್ ನೆನಪು ಸಹಜವಾಗಿ ಬಂದಿತು. ಬಸಪ್ಪನವರ ಕೊಳಲು ವಾದನವೂ ಅಷ್ಟೇ ಚೆನ್ನಾಗಿದೆ. ಉತ್ತರ ಕರ್ನಾಟಕದ ಸವಿ ಮಾತುಕತೆ ಇಂಪಾಗಿತ್ತು.

—ಕಮಲಾದೇವಿ ರಾಜಶೇಖರ ಹಳ್ಳೂರ್